## ಔಷಧಿಗೆ ಬಂದವನು ಶುರು ಮಾಡಿದ ರಿಯಾಲಿಟಿ ಶೋ!

ಸಂಜಯ್ ಹೆದರುತ್ತಾ ಮೆಲ್ಲನೆ ಅವಳ ಕಿವಿಯ ಹತ್ತಿರ ಬಂದು, ‘ನನಗೆ ಈಗಲೂ ಪಿಶಾಚಿ ಹಿಂಬಾಲಿಸಿದ ಶಬ್ದ ಕೇಳುತ್ತಿದೆ. ಈಗ ನಾವು ನಿಂತಿದ್ದೇವೆ. ಹಾಗಾಗಿ ಯಾವ ಶಬ್ದವೂ ಇಲ್ಲ. ನಾವು ನಡೆದ ಕೂಡಲೇ ಅದು ನಮ್ಮ ಹಿಂದೆಯೇ ಬರುತ್ತದೆ’ ಅಂದ.

‘ಹೌದಾ? ನನಗೆ ಕೇಳಿಸಿಯೇ ಇಲ್ವಲ್ಲ?’ ಅಂದಳು ಆಶಾ.

‘ನೀನು ಮಾತಾಡುವ ಭರದಲ್ಲಿ ನಿನಗೆ ಬಾಂಬ್ ಹೊಡೆದರೂ ಕೇಳ್ಬೇಕಲ್ವಾ?’ ಸಂಜಯ್ ಹೇಳಿದ.

‘ಹಾಗಾದರೆ ಒಂದು ಕೆಲಸ ಮಾಡುವ. ನಾವಿಬ್ಬರೂ ಮಾತಾಡದೇ ಸ್ವಲ್ಪ ಸಮಯ ನಡೆಯುವ. ಇಬ್ಬರಿಗೂ ಶಬ್ದ ಆದರೆ ಕಣ್ಣಲ್ಲೇ ಸಂಜ್ಞೆ ಮಾಡುವ’ ಆಶಾ ಹೇಳಿದಳು.

ಸಂಜಯ್ ‘ಶಬ್ದ ಖಂಡಿತಾ ಆಗುತ್ತದೆ. ಇದು ನನ್ನ ಭ್ರಮೆಯಲ್ಲ. ಒಂದು ವೇಳೆ ಶಬ್ದ ಆದರೆ ಏನು ಮಾಡೋಣ? ನಾನು ಮಾದ ಹೇಳಿದ ಹಾಗೆ ಕಲ್ಲು ಹಿಂದೆ ಬಿಸಾಡಲೇ?’ ಕೇಳಿದ.

ಆಶಾ ಮುಗುಳುನಗುತ್ತಾ ‘ಸೀತಾಪುರದಲ್ಲಿ ಹುಡುಗಿಯರ ಎದುರು ಬರಲು ಯಾವ ಪಿಶಾಚಿಗೂ ಧೈರ್ಯ ಇಲ್ಲ. ಅದೂ ಶಾಸ್ತ್ರಿಗಳ ಮೊಮ್ಮಗಳೆದುರು’ ಅಂದಳು.

ಇಬ್ಬರೂ ಏನೂ ಮಾತಾಡದೆ ಸ್ವಲ್ಪ ಸಮಯ ಕಾಡಲ್ಲಿ ನಡೆದರು.

ತರಗೆಲೆಗಳ ಶಬ್ದ ಬಿಟ್ಟರೆ ಏನೂ ಶಬ್ದ ಇಲ್ಲ. ಸಂಜಯ್ ತನ್ನ ಉಸಿರು ಬಿಗಿಹಿಡಿದು ಪಿಶಾಚಿಯ ಶಬ್ದಕ್ಕೇ ಕಾದ.

ಒಂದು ವೇಳೆ ಪಿಶಾಚಿ ಬರದಿದ್ದರೆ ತನಗೆ ಈ ಹುಡುಗಿಯ ಎದುರು ಅವಮಾನ ಎಂದುಕೊಂಡ. ಪಿಶಾಚಿ ಬಂದರೂ ಕಷ್ಟ, ಬರದಿದ್ದರೂ ಕಷ್ಟ! ಅಷ್ಟೊತ್ತಿಗೆ ಅವರ ಹಿಂದೆ ನಡೆದ ಶಬ್ದ ಕೇಳಿತು. ಅವರು ನಿಂತಾಗ ಅದೂ ನಿಲ್ಲುತ್ತಿತ್ತು. ಅವರು ಮುಂದೆ ಹೋದಾಗ ಅದೂ ನಡೆಯುವ ಶಬ್ದ.

ಸಂಜಯ್ ಆಶಾಳ ಕಡೆಗೆ ತಿರುಗಿ ಕಣ್ಣಲ್ಲೇ ಹೇಳಿದ, ‘ನೋಡಿದೆಯಾ? ನಾನು ಹೇಳಿದ್ದು ಸುಳ್ಳಾ?’.

ಆಶಾಳಿಗೂ ಆಶ್ಚರ್ಯ. ಈವರೆಗೆ ಅವಳು ನೂರಾರು ಬಾರಿ ಕಾಡಿಗೆ ಬಂದಿದ್ದಾಳೆ. ಊರಲ್ಲೆಲ್ಲ ರಾತ್ರೆಯೂ ತಿರುಗಿದ್ದಾಳೆ. ಯಾವಾಗಲೂ ಈ ತರಹ ಆದದ್ದಿಲ್ಲ. ಇಬ್ಬರೂ ಸ್ವಲ್ಪ ಸಮಯ ಹಾಗೇ ಮುಂದೆ ನಡೆದರು. ಅವರು ಬೇಗ ನಡೆದರೆ ಹಿಂದಿನಿಂದ ಬೇಗನೆ ನಡೆದ ಶಬ್ದ ಬರುತ್ತಿತ್ತು. ಅವರು ನಿಂತರೆ ಶಬ್ದವೂ ನಿಲ್ಲುತ್ತಿತ್ತು. ಸಂಜಯ್ ಗಾಬರಿಯಾದ. ಒಂದೇ ಜಾಗದಲ್ಲಿ ನಿಂತು ಕಾಲಿನಿಂದ ಕಲ್ಲೊಂದನ್ನು ಎತ್ತಲು ಶುರುಮಾಡಿದ. ಮಾದ ಕಲಿಸಿದ ವಿದ್ಯೆ ನೆನೆಸಿಕೊಂಡ.

ಆಶಾ ಇದನ್ನು ನೋಡಿದವಳು ಸರಕ್ಕನೆ ನೆಲಕ್ಕೆ ಬಗ್ಗಿ ಕೈತುಂಬಾ ಕಲ್ಲುಗಳನ್ನು ಎತ್ತಿದಳು. ಹಾಗೇ ಹಿಂದೆ ತಿರುಗಿ ಜೋರಾಗಿ ಕಲ್ಲುಗಳನ್ನು ಶಬ್ದ ಬಂದ ಕಡೆ ಬಿಸಾಡತೊಡಗಿದಳು. ಕೈ ಖಾಲಿಯಾದಾಗ ಪುನಃ ಒಂದಷ್ಟು ಕಲ್ಲು ಎತ್ತಿಕೊಂಡು ಶಬ್ದ ಬಂದ ಪೊದರಿನೆಡೆಗೆ ಜೋರು ಜೋರಾಗಿ ಬಿಸಾಡಿದಳು.

‘ಅಯ್ಯಯ್ಯೊ’ ಎಂಬ ಶಬ್ದ ಕೇಳಿತು. ಅದರ ಜೊತೆಗೆ, ‘ಸಾಕಕ್ಕ, ನಿಲ್ಲಿಸಕ್ಕ, ತಪ್ಪಾಯ್ತು’ ಎನ್ನುತ್ತಾ ಹುಡುಗನೊಬ್ಬ ಪೊದರಿನಿಂದ ಹೊರಗೆ ಬಂದ. ಆಶಾಳ ಧೈರ್ಯವನ್ನೂ ರೌದ್ರಾವತಾರವನ್ನೂ ಸಂಜಯ್ ಮೊದಲಬಾರಿಗೆ ನೋಡಿದ್ದ.

ಆಶಾ ಆ ಹುಡುಗನ ಕಡೆಗೆ ಬೇಗ ಬೇಗನೆ ಹೋಗಿ ‘ಯಾರೋ ನೀನು? ನಮ್ಮ ಹಿಂದೆ ಯಾಕೆ ಬಂದೆ?’ ಅಂತ ಜೋರಾಗಿ ಕೇಳಿದಳು.

ಹುಡುಗನ ಹಣೆಗೆ ಕಲ್ಲು ತಾಗಿ ಗಾಯವಾಗಿತ್ತು. ಕಣ್ಣಲ್ಲಿ ನೀರು ಬರುತ್ತಿತ್ತು. ‘ಅಕ್ಕಾ, ನಾನು ಶೆಟ್ರ ಅಳಿಯ. ರಜೆಯಲ್ಲಿ ಊರಿಗೆ ಬಂದಿದ್ದೇನೆ’ ಅಂದ.

